<u>**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**</u>

<u>**Spl.C. 299/2020**</u>

<u>**P.W.-3**</u>
<u>**C.W.-3**</u>

| | | |
|---|---|---|
| ಹೆಸರು | : | ಸೌಮ್ಯ .ಜಿ. |
| ತಂದೆಯ ಹೆಸರು | : | ಲೇಃ ವಸಂತ್ ಕುಮಾರ್ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಎಸ್ ಡಿ ಎ , ಮೈಸೂರು ಜಿಲ್ಲಾ ಕಾರಾಗೃಹ , ಮೈಸೂರು |
| ವಾಸಸ್ಥಳ | : | ಮೈಸೂರು |

<u>**ದಿನಾಂಕಃ 16.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**</u>

ನಾನು 2018 ರಿಂದ 2023 ರವರೆಗೆ ಮೈಸೂರಿನ ಕಾರಾಗೃಹ ಸಿಬ್ಬಂದಿ ತರಬೇತಿ ಸಂಸ್ಥೆಯಲ್ಲಿ ಎಸ್ .ಡಿ.ಎ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿಃ 03.05.2019 ರಂದು ಎಸಿಬಿ , ಕಛೇರಿ , ಮೈಸೂರು ರವರು ನನ್ನನ್ನು ಕರೆಯಿಸಿದ್ದರು. ನನ್ನ ಮೇಲಾಧಿಕಾರಿಗಳು ಸದರಿ ಕಛೇರಿಗೆ ಹೋಗಲು ಆದೇಶಿಸಿದ್ದರು. ಅದರಂತೆ ನಾನು ಎಸಿಬಿ ಕಛೇರಿಗೆ ಬಂದಾಗ ಮಧ್ಯಾಹ್ನ 12.10 ಆಗಿತ್ತು. ನಾನು ಹೋದಾಗ ಅಲ್ಲಿ ಚಾ,ಸಾ. 2–ವಾಮನ್ ರಾವ್ ಸಹ ಇದ್ದರು. ಸದರಿ ಕಛೇರಿಯಲ್ಲಿ ಚಾ,ಸಾ. 9–ಜಿ.ಶೇಖರ್ , ಪೋಲೀಸ್ ನಿರೀಕ್ಷಕರು ಇದ್ದರು. ಮೊದಲು ನಾನು ನನ್ನನ್ನು ಅವರಿಗೆ ಪರಿಚಯಿಸಿಕೊಂಡೆ.

**Spl.C.No.299/2020**
**P.W.-3**
**C.W.-3**

ನಂತರ ನನ್ನನ್ನು ಮತ್ತು ಚಾ,ಸಾ. 2 ರವರನ್ನು ಪೋಲೀಸ್ ನಿರೀಕ್ಷಕರು ಚಾ,ಸಾ. 1 ರವರಿಗೆ ಪರಿಚಯಿಸಿಕೊಟ್ಟರು. ನಂತರ ನನಗೆ ಓದಲು ಕೊಟ್ಟ ಬಗ್ಗೆ ನೆನಪಿಲ್ಲ. ಚಾ,ಸಾ. 1 ಅಲ್ಲಿ ತನಿಖಾಧಿಕಾರಿ ಸಮಕ್ಷಮ ನಮ್ಮಲ್ಲಿ ಏನನ್ನು ಹೇಳಲಿಲ್ಲ. ನನಗೆ ದೂರನ್ನು ಓದಲು ತನಿಖಾಧಿಕಾರಿಯವರು ಕೊಟ್ಟಿದ್ದರು. ನನಗೆ ದೂರದೃಷ್ಟಿ ಸಮಸ್ಯೆ ಇರುವುದರಿಂದ ಆಗ ಅದನ್ನು ಓದಲಾಗಲಿಲ್ಲ. ತನಿಖಾಧಿಕಾರಿಯವರು ಅದರಲ್ಲಿ ಇದ್ದುದ್ದದನ್ನು ನನಗೆ ಓದಿ ಹೇಳಿರುವುದಿಲ್ಲ. ಪುಟಗಳನ್ನು ತಿರುವಿ ಹಾಕಿದರು. ಅದರಲ್ಲಿ ಬರೆದಿದ್ದ ವಿಷಯಗಳು ನನಗೆ ಗೊತ್ತಾಗಲಿಲ್ಲ.

**ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಮುಂದಿನ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು , ಮುಂದುಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.